ಎನಿಸಿತ್ತು. ರಸ್ತೆಯ ಮಧ್ಯೆ ಕಂಡ ಕಂಡ ಗಂಡಸರ ಜೊತೆ ಅವಳು ಮಾತನಾಡುವುದನ್ನೂ ಆಗಾಗ ನೋಡುತ್ತಿದ್ದೆ. ಛೀ, ಇವಳಿಗೆ ಬೇರೆ ಯಾವ ಕೆಲಸ ಸಿಗಲಿಲ್ಲವೇ? ಇದಕ್ಕಿಂತ ನಾಲ್ಕು ಮನೆಗಳಲ್ಲಿ ಕಸ ಮುಸುರೆ ಮಾಡಿ ಹೊಟ್ಟೆ ತುಂಬಿಸಿಕೊಳ್ಳಬಹುದಿತ್ತು. ಯಾಕೆ ಇಂಥ ಹೊಲಸು ದಂಧೆಗೆ ಬಿದ್ದು ಬೇರೆಯವರ ಸಂಸಾರಗಳನ್ನೂ ಹಾಳು ಮಾಡುತ್ತಾರೋ ಏನೋ ಎಂದು ಒಳಗೊಳಗೇ ಸುಮಾರು ಸಲ ಬೈದುಕೊಂಡಿದ್ದೆ. ಒಂದೆರಡು ಸಲ ನಾನು, ನಯನಾ ಗುಡಿಗೆ ಹೋದಾಗ ಎದುರಿಗೇ ಬಂದ ಪುಷ್ಪಾ ಇವಳನ್ನು ಮಾತನಾಡಿಸಿದ್ದಳು. ನಯನಾ ಒಂದೆರಡು ಮಾತನಾಡಿ ನುಣುಚಿಕೊಂಡಿದ್ದಳು. ''ಇಕಿ ಜೋಡಿ ಮಾತಾಡಕೋತ ನಿಂತಿದ್ದ ನಮ್ಮ ಅತ್ತಿ ಇಲ್ಲಾ ನಮ್ಮವ್ವ ನೋಡಿದ್ರ ಮುಗದ ಹೋತು. ರಾಮಾಯಣಾನ ಮಾಡ್ತಾರ'' ಎಂದಿದ್ದಳು. ಗುಡಿಗೆ ಹೋಗುವಾಗ ಅವಳ ಮನೆ ಸಿಕ್ಕೇ ಸಿಗುತ್ತಿತ್ತು. ಆದರೆ, ಆ ಕಡೆ ನೋಡದೇ ನಯನಾ ಲಗುಬಗೆಯಿಂದ ಮುಂದೆ ಸಾಗುತ್ತಿದ್ದಳು. ನಾನು ಒಬ್ಬಳೇ ಹೊರಟಾಗ ಅವಳ ಮನೆಯ ಕಡೆ ದೃಷ್ಟಿ ಬೀರಿದ್ದೆ. ಇಂದಿನ ಕಾಲಕ್ಕೆ ತುಸು ಹೆಚ್ಚೇ ಎನಿಸುವ ಜಾಗದಲ್ಲಿ ಮುಂದೆ ಸಾಕಷ್ಟು ಖಾಲಿ ಜಾಗ ಬಿಟ್ಟು ಕಟ್ಟಿದ ಕಲ್ಲಿನ ಮಜಬೂತಾದ ಹಳೆಯ ಮನೆ. ಪುಷ್ಪಾಳ ಅಜ್ಜನೋ ಮುತ್ತಜ್ಜನೋ ಕಟ್ಟಿರಬಹುದು. ಆಗ ಅವರು ಅನುಕೂಲಸ್ಥ ಮನೆತನದವರೇ ಆಗಿದ್ದಿರಬಹುದು. ಯಾವ ಕಾರಣಕ್ಕೆ ಯಾವ ಮನೆತನಕ್ಕೆ ದುಃಸ್ಥಿತಿ ಬಂದೊದಗುತ್ತದೆ ಎನ್ನುವುದನ್ನು ಊಹಿಸುವುದು ಬಲು ಕಷ್ಟ. ಮನೆಯ ಸುತ್ತಲೂ ಮಾವಿನ ಮರ, ಹಲಸಿನ ಮರ, ಚಿಕ್ಕು ಮತ್ತು ಪೇರಲ ಹಣ್ಣಿನ ಸುಮಾರು ಏಳೆಂಟು ವರ್ಷದ ಮರಗಳು. ಪ್ರತಿಯೊಂದು ಮರಕ್ಕೂ ಶಿಸ್ತಾಗಿ ಕಟ್ಟಿದ್ದ ವೃತ್ತಾಕಾರದ ಕಟ್ಟೆಗಳು. ಮರಗಳಿಗೆ ಜೋತುಬಿಟ್ಟ ಪ್ಲಾಸ್ಟಿಕ್ಕಿನ ಕುಂಡಗಳು. ಅದರಲ್ಲೂ ಹೂವಿನ ಪುಟ್ಟ ಪುಟ್ಟ ಗಿಡಗಳು, ಸಸ್ಯಗಳು. ನೆಲದ ಮೇಲೆ ಮಣ್ಣಿನಿಂದ ಮಾಡಿದ ಆಲಂಕಾರಿಕ ಆನೆಗಳು, ಜಿಂಕೆಗಳನ್ನು ಸುಂದರವಾಗಿ ಇಟ್ಟಿದ್ದರು. ವಾವ್! ಏನೇ ಇರಲಿ, ಈ ಮನೆಮಂದಿಯ ಸೌಂದರ್ಯ ಪ್ರಜ್ಞೆಯನ್ನು ಮೆಚ್ಚಬೇಕು ಎನಿಸಿತ್ತು. ಆದರೆ, ಸರಿಯಾದ ದೇಖರೇಖಿ, ರಿಪೇರಿ ಇಲ್ಲದೇ ಒಳ್ಳೆಯ ಕಲ್ಲಿನ ಮನೆ ತನ್ನ ಕಳೆಯನ್ನು ಕಳೆದುಕೊಂಡಿತ್ತು. ಇವತ್ತು ಇದನ್ನು ಮೆಂಟೇನ್ ಮಾಡುವಷ್ಟು ಆದಾಯ ಅಪ್ಪ, ಮಗಳಿಗೆ ಇಲ್ಲ! ಈ ಪುಷ್ಪಾ ಒಬ್ಬಳೇ ದುಡಿಯುವವಳು. ಅವಳ ಅಪ್ಪ ಜೋತಾಡುವ ಬಡಕಲು ಮನುಷ್ಯ. ದಿನಾಲೂ ಕುಡಿದು ತೂರಾಡುತ್ತ ಮನೆ ಸೇರುವವನನ್ನು ಯಾರಾದರೂ ನೂಕಿದರೆ ಸಾಕು, ಬಿದ್ದು ಸತ್ತೇ ಹೋಗಿಬಿಡಬಹುದು ಎನಿಸುತ್ತಿತ್ತು. ಇಡೀ ಮನೆಯಲ್ಲಿ ಎಲ್ಲೋ ಒಂದು ಕಡೆ ಮಿಣಿಮಿಣಿ ಎನ್ನುವ ದೀಪ. ಉಳಿದೆಲ್ಲ ಕಡೆ ಕತ್ತಲೆ. ಪುಷ್ಪಾ ರಾತ್ರಿ ತಡವಾಗಿ ಮನೆಗೆ ಬರುತ್ತಿದ್ದುದೂ ಒಮ್ಮೊಮ್ಮೆ ತಿಳಿಯುತ್ತಿತ್ತು. ರಾತ್ರಿ ಊಟ ಮುಗಿಸಿ ನಮ್ಮ ಮನೆಯ ಬಾಲ್ಕನಿಯಲ್ಲಿ ಬಂದು ನಿಂತಾಗ ಇವಳು ಅಲ್ಲೇ ರಸ್ತೆಯ ತಿರುವಿನಲ್ಲಿ ರಿಕ್ಷಾ ಇಳಿದು, ತಲೆ ತಗ್ಗಿಸಿಕೊಂಡು ಲಗುಬಗೆಯಲ್ಲಿ ನಡೆಯುತ್ತಿದ್ದಳು. ತನ್ನ ಮನೆಯಿರುವ ಓಣಿಯಲ್ಲಿ ರಿಕ್ಷಾ ಇಳಿಯದೇ ಇಲ್ಲಿ ಇಳಿಯುವುದು ಅವಳು ಮಾಡುವ ಪಾಪದ ಕೆಲಸವನ್ನು ಜನರಿಂದ ಮರೆಮಾಚುವುದಕ್ಕಾಗಿಯೇ. ಹಾಗೆ ಅವಳು ತಲೆ ತಗ್ಗಿಸಿ ಗಡಿಬಿಡಿಯಿಂದ ಹೆಜ್ಜೆ ಹಾಕುವಾಗ ನನಗೆ ಅವಳ ಬಗ್ಗೆ ವಿಪರೀತ ಸಿಟ್ಟು, ಅಸಹ್ಯ ಹುಟ್ಟುತ್ತಿತ್ತು.

ಭಾನುವಾರದ ಬೆಳಗಿನ ಕೆಲಸಗಳೆಲ್ಲ ಮುಗಿದ ಮೇಲೆ ನನಗೆ ಮತ್ತೆ ಅವಳು ನೆನಪಾದಳು. ಹನ್ನೊಂದು ಗಂಟೆಗೆ ಬರುತ್ತಾಳೆ. ಬರುತ್ತಾಳೋ ಇಲ್ಲವೋ ಯಾರಿಗ್ಗೊತ್ತು? ನೋಡಬೇಕು. ಏನು ಹೇಳಬಹುದು? ಮಕ್ಕಳಾದರೂ ಇದ್ದಿದ್ದರೆ ನಿಮ್ಮ ಕಾಲೇಜಿನಲ್ಲಿ ಒಂದು ಸೀಟು ಕೊಡಿಸಿ ಎಂದು ಕೇಳಬಹುದಿತ್ತೇನೊ. ಆದರೆ, ಅವಳಿಗೆ ಮದುವೆಯೇ ಆಗಿಲ್ಲ. ಒಂದು ವೇಳೆ ಆಗಿ ಮಕ್ಕಳಾಗಿದ್ದರೂ ಇಂಥ ಶಹರವನ್ನು ಬಿಟ್ಟು ನಾನು ಹೋಗುವ ತಾಲ್ಲೂಕಿನ ಕಾಲೇಜಿಗೆ ಬರಲು ಯಾವ ಹುಡುಗರೂ ಮನಸ್ಸು ಮಾಡುವುದಿಲ್ಲ. ಸುತ್ತಮುತ್ತಲಿನ ಹಳ್ಳಿಯ ಹುಡುಗರನ್ನು ಹಿಡಿದುಕೊಂಡು ಬರುವುದೇ ದೊಡ್ಡ ಚಾಲೆಂಜ್ ಆಗಿದೆ ನಮಗೆ. ಎಲ್ಲರಿಗೂ ದೊಡ್ಡ ಊರಿನ ಆಕರ್ಷಣೆ. ''ಬಸ್ಸಿನಲ್ಲಿ ಜೋತುಬಿದ್ದು